# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 148 (203) |
| 2 | ಸದಸ್ಯರ ಹೆಸರು | ಶ್ರೀ ಎಂ.ಎಲ್. ಅನಿಲ್ ಕುಮಾರ್<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | 18-08-2026 |
| 4 | ಉತ್ತರಿಸುವವರು | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |
| 5 | ವಿಷಯ | ರೇಷ್ಮೆ ಕೃಷಿ ಬೆಳೆಗೂ ವಿಮಾ ಪದ್ಧತಿಯನ್ನು ಜಾರಿಗೊಳಿಸುವ ಬಗ್ಗೆ |
| | **ಪ್ರಶ್ನೆಗಳು** | **ಉತ್ತರ** |
| ಅ) | ರೇಷ್ಮೆ ಇಲಾಖೆಯಿಂದ ಸಲಕರಣೆಗಳನ್ನು ಮತ್ತು ಸೋಂಕು ನಿವಾರಕವನ್ನು ಯಾವ ರೀತಿಯಲ್ಲಿ ರೈತರಿಗೆ ನೀಡಲಾಗುತ್ತಿದೆ. ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಯಲ್ಲಿ ನೀಡುತ್ತಿರುವ ಹಾಗೆಯೇ ರೇಷ್ಮೆ ಇಲಾಖೆಯಲ್ಲಿಯೂ ಸಹ ನೀಡಲು ಸರ್ಕಾರದಿಂದ ಯಾವಾಗ ಕ್ರಮ ಕೈಗೊಳ್ಳಲಾಗುವುದು: | ರೇಷ್ಮೆ ನಿರ್ದೇಶನಾಲಯದ ಆದೇಶ ಸಂಖ್ಯೆ: DOS/EPRO/RFIX(BLDS)/1/2026 ದಿನಾಂಕ:30-07-2026ರಲ್ಲಿ 2026-27ನೇ ಸಾಲಿನ ಹಿಪ್ಪುನೇರಳೆ ಬೇಸಾಯ ಹಾಗೂ ರೇಷ್ಮೆ ಹುಳು ಸಾಕಾಣಿಕೆಗೆ ಅಗತ್ಯವಿರುವ ಸೋಂಕು ನಿವಾರಕಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್ ರೇಷ್ಮೆ ಉಪ ನಿರ್ದೇಶಕರ ಹಂತದಲ್ಲಿಯೇ ಟೆಂಡರ್ ಕರೆಯಲು ಅನುಮತಿ ಹಾಗೂ ಆದೇಶ ನೀಡಲಾಗಿದೆ.<br><br>2026-27ನೇ ಸಾಲಿಗೆ ರೇಷ್ಮೆ ಇಲಾಖೆಯಿಂದ ರೇಷ್ಮೆ ಭಾಗೀದಾರರಿಗೆ ಹಿಪ್ಪುನೇರಳೆ ಬೇಸಾಯ, ಹುಳು ಸಾಕಾಣಿಕೆ ಸಲಕರಣೆಗಳು ಹಾಗೂ ಗೂಡಿನ ನಂತರದ ಚಟುವಟಿಕೆಗಳಲ್ಲಿ ಬಳಸುವ ಅವಶ್ಯಕ ಸಲಕರಣೆಗಳನ್ನು ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಯಲ್ಲಿ ನೀಡುತ್ತಿರುವ ಹಾಗೆಯೇ, ರೇಷ್ಮೆ ಭಾಗೀದಾರರ ಆಯ್ಕೆ ಇಚ್ಛೆಗೆ ರೇಷ್ಮೆ ಇಲಾಖೆಯಲ್ಲಿಯೂ ಸಹ ಎಂಪ್ಯಾನಲ್ ಮಾಡುವ ಸಂಸ್ಥೆಗಳಲ್ಲಿ ಸಲಕರಣೆಗಳನ್ನು ಖರೀದಿ ಮಾಡುವುದರ ಕುರಿತಂತೆ ಪರಿಶೀಲಿಸಲಾಗುತ್ತಿದೆ. |
| ಆ) | ಕೃಷಿ ಇಲಾಖೆ ಮತ್ತು ತೋಟಗಾರಿಕಾ ಬೆಳೆಗಳಿಗೆ ವಿಮಾ ಪದ್ಧತಿ ಜಾರಿಯಲ್ಲಿರುವುದರಿಂದ ಸದರಿ ಬೆಳೆಗಳು ಹವಾಮಾನ ವೈಪರೀತ್ಯಗಳಿಂದ ನಷ್ಟಕ್ಕೆ ಒಳಗಾದಲ್ಲಿ ಬೆಳೆ ವಿಮಾ ಪದ್ಧತಿ ಸಹಾಯಕ್ಕೆ ಬರುವಂತೆ ರೇಷ್ಮೆ ಕೃಷಿಗೂ ಸಹ ಬೆಳೆ ವಿಮಾ ಪದ್ಧತಿಯನ್ನು ಜಾರಿಗೊಳಿಸಲು ಸರ್ಕಾರ ಚಿಂತಿಸಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಈ ಪದ್ಧತಿಯನ್ನು ಜಾರಿಗೊಳಿಸಲಾಗುವುದು;<br>(ಸಂಪೂರ್ಣವಾದ ಮಾಹಿತಿ ನೀಡುವುದು) | ಕೇಂದ್ರ ರೇಷ್ಮೆ ಮಂಡಳಿ, ಬೆಂಗಳೂರು, ಇವರು ಭಾರತ ದೇಶದಲ್ಲಿ ರೇಷ್ಮೆ ಕೃಷಿಗೆ ಬೆಳೆ ವಿಮೆ ಸೌಲಭ್ಯ ನೀಡುವ ಬಗ್ಗೆ, Standard Operating Procedure (SOP) ಸಿದ್ಧಪಡಿಸಲು ವಿಷಯ ತಜ್ಞರ ಸಮಿತಿಯನ್ನು ರಚಿಸಿದ್ದು, ವರದಿಯು ಅಂತಿಮಗೊಂಡ ನಂತರ ರಾಜ್ಯದಲ್ಲಿ ರೇಷ್ಮೆ ಬೆಳೆಗೂ ಸಹಾ ವಿಮಾ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ ಕ್ರಮ ವಹಿಸಲಾಗುವುದು. |

| | | |
|---|---|---|
| ಇ) | ಪ್ರಸ್ತುತ ರೇಷ್ಮೆ ಗೂಡಿಗೆ ವೈಜ್ಞಾನಿಕವಾಗಿ ಕನಿಷ್ಠ ಬೆಂಬಲ ಬೆಲೆಯನ್ನು ಹಾಗೂ ರೇಷ್ಮೆ ಗೂಡಿಗೆ ಪ್ರೋತ್ಸಾಹಧನವನ್ನು ಎಷ್ಟು ನೀಡಲಾಗುತ್ತಿದೆ; ಸದರಿ ಬೆಲೆಯನ್ನು ಹೆಚ್ಚಿಸಲು ಸರ್ಕಾರದಿಂದ ಯಾವಾಗ ಕ್ರಮ ಕೈಗೊಳ್ಳಲಾಗುವುದು; (ಸಂಪೂರ್ಣವಾದ ಮಾಹಿತಿ ನೀಡುವುದು) | ಶ್ರೀ ಬಸವರಾಜ್, ಹೆಚ್. ಸಮಿತಿಯ ಶಿಫಾರಸ್ಸಿನ ಮೇರೆಗೆ ಕಾಲಕಾಲಕ್ಕೆ ವೈಜ್ಞಾನಿಕವಾಗಿ ಉತ್ಪಾದನಾ ವೆಚ್ಚವನ್ನು ಪರಿಷ್ಕರಣೆ ಮಾಡಿ ಕನಿಷ್ಠ ಬೆಂಬಲ ಬೆಲೆಯನ್ನು ಹಾಗೂ ರೇಷ್ಮೆ ಗೂಡಿನ ಧಾರಣೆಯು ಉತ್ಪಾದನಾ ವೆಚ್ಚಕ್ಕಿಂತ ಕಡಿಮೆಯಾದ ಸಂದರ್ಭದಲ್ಲಿ ರಕ್ಷಣಾತ್ಮಕ / ಬೆಂಬಲ ಬೆಲೆಯನ್ನು ನೀಡಲು ಕ್ರಮವಹಿಸಲಾಗಿದೆ. 2022-23 ಮತ್ತು 2023-24 ನೇ ಸಾಲುಗಳಿಗೆ ರೇಷ್ಮೆ ಗೂಡಿನ ಉತ್ಪಾದನಾ ವೆಚ್ಚವು ಪ್ರತಿ ಕೆ.ಜಿ. ಮಿಶ್ರತಳಿ ಗೂಡಿಗೆ ರೂ.326/- ಹಾಗೂ ದ್ವಿತಳಿ ಗೂಡಿಗೆ ರೂ.371/- ಗಳನ್ನು ನಿಗದಿ ಪಡಿಸಲಾಗಿರುತ್ತದೆ.<br><br>2024-25 ಮತ್ತು 2025-26ನೇ ಸಾಲುಗಳಿಗೆ, ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ ಇವರು ಸಲ್ಲಿಸಿರುವ ಪರಿಷ್ಕೃತ ವರದಿ ಹಾಗೂ ಈ ಕುರಿತಂತೆ ನಡೆದ ಸಮಿತಿ ಸಭೆಗಳ ನಿರ್ಣಯದನ್ವಯ, ರೇಷ್ಮೆ ಗೂಡಿನ ಉತ್ಪಾದನಾ ವೆಚ್ಚ ಪ್ರತಿ ಕೆ.ಜಿ. ಮಿಶ್ರತಳಿ ಗೂಡಿಗೆ ಹಾಗೂ ದ್ವಿತಳಿ ಗೂಡಿಗೆ ರಕ್ಷಣಾತ್ಮಕ/ ಬೆಂಬಲ ಬೆಲೆಯನ್ನು ನಿಗಧಿಪಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.<br><br>ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ಮಾರಾಟ ಮಾಡುವ ರೇಷ್ಮೆ ಬೆಳೆಗಾರರಿಗೆ ಪ್ರತಿ ಕೆ.ಜಿ ದ್ವಿತಳಿ ಸಂಕರಣ ಗೂಡಿಗೆ ಈ ಹಿಂದೆ ರೂ.10/-ರಂತೆ ನೀಡಲಾಗುತ್ತಿದ್ದ ಪ್ರೋತ್ಸಾಹಧನವನ್ನು, ಸರ್ಕಾರದ ಆದೇಶ ಸಂಖ್ಯೆ: ರೇಷ್ಮೆ 129 ರೇಕೃವಿ 2024, ಬೆಂಗಳೂರು ದಿನಾಂಕ:04-06-2024ರನ್ವಯ ರೂ.10/- ರಿಂದ ರೂ.30/-ಗಳಿಗೆ ಹೆಚ್ಚಿಸಿ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. |
| ಈ) | ರೇಷ್ಮೆ ಇಲಾಖೆಯಲ್ಲಿ ತಾಂತ್ರಿಕ ಮತ್ತು ತಾಂತ್ರಿಕೇತರ ಹುದ್ದೆಗಳು ಎಷ್ಟಿವೆ; ಬಾಕಿಯಿರುವ ಹುದ್ದೆಗಳು ಎಷ್ಟು; ಬಾಕಿಯಿರುವ ಹುದ್ದೆಗಳನ್ನು ಯಾವ ಕಾಲಮಿತಿಯೊಳಗೆ ತುಂಬಲಾಗುವುದು; (ಪ್ರತಿ ಜಿಲ್ಲಾ ವೃಂದವಾರು/ ಹುದ್ದೆವಾರು ಸಂಪೂರ್ಣವಾದ ಮಾಹಿತಿ ನೀಡುವುದು) | ರೇಷ್ಮೆ ಇಲಾಖೆಯಲ್ಲಿ 1809 ತಾಂತ್ರಿಕ ಮತ್ತು 886 ತಾಂತ್ರಿಕೇತರ ಹುದ್ದೆಗಳು ಇರುತ್ತವೆ.<br>ಈ ಪೈಕಿ ಅನುಕ್ರಮವಾಗಿ 1213 ತಾಂತ್ರಿಕ ಮತ್ತು 418 ತಾಂತ್ರಿಕೇತರ ಹುದ್ದೆಗಳು ಖಾಲಿ ಇರುತ್ತವೆ.<br>ಸರ್ಕಾರದ ನಿರ್ದೇಶನದ ಮೇರೆಗೆ ಖಾಲಿ ಇರುವ ಹುದ್ದೆಗಳ ಪೈಕಿ 65 ತಾಂತ್ರಿಕ ಹಾಗೂ 13 ತಾಂತ್ರಿಕೇತರ ಹುದ್ದೆಗಳನ್ನು ನೇರನೇಮಕಾತಿ ಮೂಲಕ ತ್ವರಿತಗತಿಯಲ್ಲಿ ಭರ್ತಿ ಮಾಡಲು ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.<br>ಮುಂಬಡ್ತಿ ಹುದ್ದೆಗಳನ್ನು ಕಾಲಕಾಲಕ್ಕೆ ಲಭ್ಯತೆಯನುಸಾರ ಭರ್ತಿ ಮಾಡಲಾಗುತ್ತದೆ.<br>ಉಳಿದಂತೆ ಹುದ್ದೆಗಳ ಭರ್ತಿ ಕುರಿತು ಕಾಲಕಾಲಕ್ಕೆ ಪರಾಮರ್ಶೆಗೆ ಒಳಪಡಿಸಲಾಗುತ್ತದೆ.<br>ಸದ್ಯ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಯಾವುದೇ ಕಾಲಮಿತಿ ಇರುವುದಿಲ್ಲ.<br>ಜಿಲ್ಲಾ ವೃಂದವಾರು / ಹುದ್ದೆವಾರು ಖಾಲಿ ವಿವರಗಳನ್ನು (ಅನುಬಂಧ -1 ಮತ್ತು 2) ಲಗತ್ತಿಸಿದೆ. |

| | | |
|---|---|---|
| ಉ) | ರಾಜ್ಯದಲ್ಲಿ ರೇಷ್ಮೆ ಕೃಷಿಯ ಉಳಿವಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು; ಸದರಿ ಸಂಸ್ಥೆಯಲ್ಲಿ ಹಾಲಿ ನಿರ್ದೇಶಕರ ಹುದ್ದೆಗೆ ಐ.ಎ.ಎಸ್ ಅಧಿಕಾರಿಗಳನ್ನು ನೇಮಿಸುವ ಪದ್ಧತಿಯನ್ನು ಕೈಬಿಟ್ಟು ಅದೇ ಅಭಿವೃದ್ಧಿ ಸಂಸ್ಥೆಯಲ್ಲಿ ಸುದೀರ್ಘವಾಗಿ ಸೇವೆ ಸಲ್ಲಿಸುತ್ತಿರುವ ಹಿರಿಯ ವಿಜ್ಞಾನಿಗಳನ್ನು ನಿರ್ದೇಶಕರಾಗಿ ನೇಮಿಸುವುದರಿಂದ ರೇಷ್ಮೆ ಕೃಷಿ ಸಂಶೋಧನೆ ಮತ್ತು ಅಭಿವೃದ್ಧಿಗೆ ಸಹಾಯವಾಗುವುದು ಸರ್ಕಾರದ ಗಮನದ ಲ್ಲಿದೆಯೇ; ಇಲ್ಲದಿದ್ದಲ್ಲಿ, ನಿರ್ದೇಶಕರ ನೇಮಕದ ಕುರಿತು ಯಾವ ಕ್ರಮ ಕೈಗೊಳ್ಳಲಾಗುವುದು?<br>(ಸಂಪೂರ್ಣವಾದ ಮಾಹಿತಿ ನೀಡುವುದು) | ಕರ್ನಾಟಕ ಸರ್ಕಾರವು ರಾಜ್ಯದಲ್ಲಿ **ರೇಷ್ಮೆ ಕೃಷಿಯ ಉಳಿವಿಗಾಗಿ ಹಾಗೂ ರೈತರ ಆರ್ಥಿಕ ಪ್ರಗತಿಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.**<br><br>• **ವಿಬಿ-ಜೀ ರಾಮ್ ಜೀ ಕಾರ್ಯಕ್ರಮದಲ್ಲಿ ಹೊಸದಾಗಿ ಹಿಪ್ಪುನೇರಳೆ ನಾಟಿ ಮಾಡಿಕೊಳ್ಳುವುದಕ್ಕೆ ಹಾಗೂ** ಮಣ್ಣಿನ ಗುಣಮಟ್ಟ ಸುಧಾರಿಸಲು ಹಿಪ್ಪುನೇರಳೆ ತೋಟಗಳಿಗೆ **ಹನಿ ನೀರಾವರಿ (Drip Irrigation)** ಅಳವಡಿಸಿಕೊಳ್ಳಲು **PMKSY ಯೋಜನೆಯಡಿ ಸಹಾಯಧನ ನೀಡಲಾಗುತ್ತಿದೆ.**<br><br>• ಪ್ರತ್ಯೇಕ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ, ಹಾಗೂ ಹುಳು ಸಾಕಾಣಿಕೆಯಲ್ಲಿ ಬಳಸುವ ಸಲಕರಣೆಗಳ ಖರೀದಿಗಾಗಿ ಸಹಾಯಧನವನ್ನು ನೀಡಲಾಗುತ್ತಿದೆ.<br><br>• ಉತ್ತರ ಕರ್ನಾಟಕ ಭಾಗದ ರೇಷ್ಮೆ ಬೆಳೆಗಾರರಿಗೆ ನೆರವಾಗಲು ರೇಷ್ಮೆ ಗೂಡು ಸಾಗಾಣಿಕೆಗೆ **ಪ್ರತಿ ಕೆಜಿಗೆ ₹20/- ಸಾಗಾಣಿಕಾ ವೆಚ್ಚ** ನೀಡಲಾಗುತ್ತಿದೆ. ಇದರೊಂದಿಗೆ ವಿವಿಧ ಜಿಲ್ಲೆಗಳಲ್ಲಿ ವಿಶೇಷ **'ಸಿಲ್ಕ್ ಪಾರ್ಕ್' (Silk Parks)** ಸ್ಥಾಪಿಸಲಾಗುತ್ತಿದೆ.<br><br>• ರೇಷ್ಮೆ ಬೆಳೆಗಾರರು ಬೆಳೆಯುವ ಸಂಕರಣ ದ್ವಿತಳಿ ರೇಷ್ಮೆ ಗೂಡನ್ನು ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ಮಾರಾಟ ಮಾಡುವುದಕ್ಕೆ ಪ್ರತಿ ಕೆ.ಜಿ. ಸಂಕರಣ ದ್ವಿತಳಿ ಗೂಡಿಗೆ ರೂ 30/- ರಂತೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.<br><br>• ರಾಜ್ಯದಲ್ಲಿ ರೇಷ್ಮೆ ಭಾಗೀದಾರರಿಗೆ ಸುಸಜ್ಜಿತ ಅತ್ಯಾಧುನಿಕ ಸೌಲಭ್ಯಗಳನ್ನು ಒದಗಿಸಲು ರಾಮನಗರ, ಚನ್ನಪಟ್ಟಣ, ಶಿಡ್ಲಘಟ್ಟ, ಕಲಬುರ್ಗಿ, ಹಾವೇರಿ ಹಾಗೂ ಮೈಸೂರು, ಈ ಭಾಗಗಳಲ್ಲಿ ಹೈಟೆಕ್ ರೇಷ್ಮೆ ಗೂಡಿನ ಮಾರುಕಟ್ಟೆಯನ್ನು ನಿರ್ಮಾಣ ಮಾಡಲಾಗುತ್ತಿದೆ.<br><br>• ಅಂತರಾಷ್ಟ್ರೀಯ ಮಟ್ಟದ ನೂಲು ಉತ್ಪಾದಿಸಲು ನೂಲು ಬಿಚ್ಚಾಣಿಕೆದಾರರಿಗೆ ARM (Automatic Reeling Machine) ಗಳ ಸ್ಥಾಪನೆಗಾಗಿ ಘಟಕ ವೆಚ್ಚದ ರೂ.135 ಲಕ್ಷಗಳಿಗೆ ಶೇಕಡ 90% ರಷ್ಟು ಸಹಾಯಧನ ನೀಡಲಾಗುತ್ತಿದೆ,<br><br>• ನೂಲು ಬಿಚ್ಚಾಣಿಕೆದಾರರನ್ನು ಪ್ರೋತ್ಸಾಹಿಸಲು ಸಿಲ್ಕ್ ಟೆಕ್ ಪಾರ್ಕ್ ಗಳ ನಿರ್ಮಾಣ ಹಾಗೂ ಇವರು ಉತ್ಪಾದಿಸುವ ರೇಷ್ಮೆ ನೂಲಿಗೆ ಸಹಾಯಧನ ನೀಡಲು ಕ್ರಮವಹಿಸಲಾಗುತ್ತಿದೆ. |

| | | | |
|---|---|---|---|
| | | | ಮುಂದುವರೆದು, ಕರ್ನಾಟಕ ರಾಜ್ಯ ರೇಷ್ಮೆ ಸಂಶೋದನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ ಸಂಸ್ಥೆಯ ನಿರ್ದೇಶಕರ ಹುದ್ದೆಗೆ ಭಾರತೀಯ ಆಡಳಿತ ಸೇವೆ(I.A.S) ಅಧಿಕಾರಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ನೇಮಿಸಲಾಗುತ್ತಿದೆ. |

ರೇಷ್ಮೆ 101 ರೇಕೃವಿ 2026(2265744)

(ಪುಟ್ಟರಂಗಶೆಟ್ಟಿ)
ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು

# ಅನುಬಂಧ-1

| ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:148(203) (ಈ)ಗೆ ವಿವರ | | | | | | | | | | | | | | | | | | | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| ದಿನಾಂಕ:01/08/2026 ರಲ್ಲಿದ್ದಂತೆ ರೇಷ್ಮೆ ಇಲಾಖೆಯಲ್ಲಿ ಜಿಲ್ಲಾವಾರು ಮಂಜೂರಾಗಿರುವ ಹುದ್ದೆಗಳ ವಿವರ | | | | | | | | | | | | | | | | | | | | | | | | | | | | | | | | | | | | | | | |
| ಕ್ರ.ಸಂ. | ಜಿಲ್ಲೆ | ತಾಂತ್ರಿಕ | | | | | | | | | | | | ತಾಂತ್ರಿಕೇತರ | | | | | | | | | | | | | | | | | | | | | | | | | ಒಟ್ಟಾರೆ |
| | | ಎ | | | | ಬಿ | | | ಸಿ | | | | ತಾಂತ್ರಿಕ (ಎ+ಬಿ+ಸಿ) ಒಟ್ಟು | ಎ | | | | | | | | ಬಿ | | | | | ಸಿ | | | | | | | | ಡಿ | | | ತಾಂತ್ರಿಕೇತರ (ಎ+ಬಿ+ಸಿ+ಡಿ) ಒಟ್ಟು | |
| | | ಅನಿ(ತಾಂ) | ರೇಜಂನಿ | ರೇಉನಿ | ಒಟ್ಟು | ರೇಸನಿ | ರೇವಿಅ | ಒಟ್ಟು | ರೇನಿ | ರೇಪ್ರದ | ರೇಪ್ರವ | ಒಟ್ಟು | | ರೇಕ್ಷೇಅ | ಜಂನಿ(ಆ) | ಮುಲೆಅ | ಕಾಅ | ಸಹಾಅ | ಆಅ | ಲೆಅ | ಒಟ್ಟು | ಪಸ್ವ-1 | ಪಸ್ವ-2 | ಸಅ | ಕಿಅ(ವಿದ) | ಒಟ್ಟು | ಅಧೀ | ಶೀಅ | ಪ್ರದಸ | ಶೀಲಿ | ದ್ವಿದಸ | ಬೆರ | ವಾಚಾ | ಒಟ್ಟು | ಅಸುಚ | ಗ್ರೂಪ್ ಡಿ | ಒಟ್ಟು | | |
| | | 1 | 2 | 3 | | 4 | 5 | | 6 | 7 | 8 | | | 9 | 10 | 11 | 12 | 13 | 14 | 15 | | 16 | 17 | 18 | 19 | | 20 | 21 | 22 | 23 | 24 | 25 | 26 | | 27 | 28 | | | |
| 1 | ಬಾಗಲಕೋಟೆ | | | 1 | 1 | 2 | 4 | 6 | 12 | 10 | 1 | 23 | 30 | | | | | | | | 0 | | | | | 0 | | | 3 | | 1 | 1 | 1 | 6 | | 6 | 6 | 12 | 42 |
| 2 | ಬೆಂಗಳೂರು(ನ) | 1 | 3 | 8 | 12 | 18 | 12 | 30 | 22 | 28 | 9 | 59 | 101 | 1 | 1 | 1 | 1 | 1 | 1 | 3 | 9 | 3 | 8 | 1 | 1 | 13 | 20 | 1 | 37 | 5 | 17 | 17 | 11 | 108 | 9 | 35 | 44 | 174 | 275 |
| 3 | ಬೆಂಗಳೂರು(ಗ್ರಾ) | | | 1 | 1 | 6 | 12 | 18 | 37 | 36 | 12 | 85 | 104 | | | | | | | | 0 | | 1 | | | 1 | 2 | | 6 | | 3 | 2 | 4 | 17 | 1 | 12 | 13 | 31 | 135 |
| 4 | ಬೆಳಗಾಂ | | | 1 | 1 | 2 | 4 | 6 | 16 | 16 | 4 | 36 | 43 | | | | | | | | 0 | | | | | 0 | 1 | | 3 | | 1 | 1 | 1 | 7 | | 9 | 9 | 16 | 59 |
| 5 | ಬಳ್ಳಾರಿ | | | | 0 | 2 | 4 | 6 | 8 | 12 | 4 | 24 | 30 | | | | | | | | 0 | | | | | 0 | | | 2 | | | 1 | 0 | 3 | | 3 | 3 | 6 | 36 |
| 6 | ಬೀದರ್ | | | 1 | 1 | 2 | 3 | 5 | 8 | 8 | 5 | 21 | 27 | | | | | | | | 0 | | | | | 0 | 1 | | 3 | | 1 | 1 | 1 | 7 | | 4 | 4 | 11 | 38 |
| 7 | ಬಿಜಾಪುರ | | | 1 | 1 | 1 | 2 | 3 | 6 | 6 | 3 | 15 | 19 | | | | | | | | 0 | | 1 | | | 1 | | | 2 | | | | 1 | 3 | | 2 | 2 | 6 | 25 |
| 8 | ಚಾಮರಾಜನಗರ | | | 3 | 3 | 10 | 2 | 12 | 24 | 22 | 13 | 59 | 74 | | | | | | | | 0 | | 1 | | | 1 | 2 | | 10 | | 1 | 2 | 4 | 19 | 2 | 23 | 25 | 45 | 119 |
| 9 | ಚಿಕ್ಕಮಗಳೂರು | | | | 0 | 1 | 1 | 2 | 2 | 3 | 0 | 5 | 7 | | | | | | | | 0 | | | | | 0 | | | 1 | | | | 1 | 2 | | 2 | 2 | 4 | 11 |
| 10 | ಚಿತ್ರದುರ್ಗ | | | 1 | 1 | 4 | 8 | 12 | 13 | 16 | 9 | 38 | 51 | | | | | | | | 0 | | | | | 0 | 2 | 1 | 4 | | 3 | 1 | 4 | 15 | | 6 | 6 | 21 | 72 |
| 11 | ಚಿಕ್ಕಬಳ್ಳಾಪುರ | | | 3 | 3 | 14 | 17 | 31 | 48 | 74 | 23 | 145 | 179 | | | | | | | | 0 | | 2 | | | 2 | 3 | | 14 | 1 | 8 | 3 | 7 | 36 | 4 | 26 | 30 | 68 | 247 |
| 12 | ದಕ್ಷಿಣ ಕನ್ನಡ | | | | 0 | 0 | | 0 | 0 | 0 | 0 | 0 | 0 | | | | | | | | 0 | | | | | 0 | | | | | | | 0 | 0 | | | 0 | 0 | 0 |
| 13 | ದಾವಣಗೆರೆ | | | | 0 | 1 | 2 | 3 | 3 | 4 | 2 | 9 | 12 | | | | | | | | 0 | | | | | 0 | | | 1 | | 1 | 1 | 1 | 4 | | 1 | 1 | 5 | 17 |
| 14 | ಧಾರವಾಡ | | | 2 | 2 | 2 | 1 | 3 | 4 | 4 | 0 | 8 | 13 | | | | | | | | 0 | | 1 | | | 1 | | | 2 | | 1 | 1 | 1 | 5 | | 3 | 3 | 9 | 22 |
| 15 | ಗದಗ | | | 1 | 1 | 1 | 4 | 5 | 7 | 7 | 0 | 14 | 20 | | | | | | | | 0 | | | | | 0 | | | 2 | | 1 | | 1 | 4 | | 3 | 3 | 7 | 27 |
| 16 | ಗುಲ್ಬರ್ಗಾ | | | 1 | 1 | 1 | 3 | 4 | 7 | 7 | 2 | 16 | 21 | | | | | | | | 0 | | | | | 0 | 1 | | 2 | | 2 | 1 | 1 | 7 | | 4 | 4 | 11 | 32 |
| 17 | ಹಾಸನ | | | 1 | 1 | 9 | 4 | 13 | 31 | 21 | 10 | 62 | 76 | | | | | | | | 0 | | 1 | | | 1 | 3 | | 10 | | 1 | 1 | 4 | 19 | | 20 | 20 | 40 | 116 |
| 18 | ಹಾವೇರಿ | | 1 | 1 | 2 | 3 | 3 | 6 | 11 | 12 | 0 | 23 | 31 | | | | | | | | 0 | | 2 | | | 2 | 1 | | 4 | 2 | 3 | 2 | 3 | 15 | | 5 | 5 | 22 | 53 |
| 19 | ಕೊಡಗು | | | | 0 | 0 | | 0 | 0 | 0 | 0 | 0 | 0 | | | | | | | | 0 | | | | | 0 | | | | | | | 0 | 0 | | | 0 | 0 | 0 |
| 20 | ಕೋಲಾರ | | | 2 | 2 | 10 | 17 | 27 | 33 | 58 | 18 | 109 | 138 | | | | | | | | 0 | | 1 | | | 1 | 2 | | 10 | | 3 | 1 | 4 | 20 | 1 | 17 | 18 | 39 | 177 |
| 21 | ಕೊಪ್ಪಳ | | | 1 | 1 | 1 | 2 | 3 | 5 | 4 | 3 | 12 | 16 | | | | | | | | 0 | | | | | 0 | 1 | | 2 | | 1 | 1 | 1 | 6 | | 4 | 4 | 10 | 26 |
| 22 | ಮಂಡ್ಯ | | | 2 | 2 | 9 | 16 | 25 | 36 | 43 | 18 | 97 | 124 | | | | | | | | 0 | | 1 | | | 1 | 2 | | 11 | | 3 | 2 | 7 | 25 | | 27 | 27 | 53 | 177 |
| 23 | ಮೈಸೂರು | | 2 | 3 | 5 | 11 | 9 | 20 | 27 | 29 | 15 | 71 | 96 | | | | | 1 | | | 1 | 1 | 1 | 1 | | 3 | 3 | | 11 | 1 | 2 | 5 | 5 | 27 | | 19 | 19 | 50 | 146 |
| 24 | ರಾಯಚೂರು | | | 1 | 1 | 1 | 2 | 3 | 7 | 5 | 5 | 17 | 21 | | | | | | | | 0 | | | | | 0 | 1 | | 2 | | 1 | 1 | 1 | 6 | | 5 | 5 | 11 | 32 |
| 25 | ರಾಮನಗರ | | | 5 | 5 | 16 | 26 | 42 | 71 | 93 | 37 | 201 | 248 | | | | | | | | 0 | | 3 | | | 3 | 4 | | 19 | | 7 | 3 | 6 | 39 | 5 | 42 | 47 | 89 | 337 |
| 26 | ಶಿವಮೊಗ್ಗ | | | 1 | 1 | 2 | 1 | 3 | 3 | 3 | 0 | 6 | 10 | | | | | | | | 0 | | | | | 0 | 1 | | 3 | | 1 | 1 | 1 | 7 | | 3 | 3 | 10 | 20 |
| 27 | ತುಮಕೂರು | | | 2 | 2 | 23 | 22 | 45 | 87 | 111 | 45 | 243 | 290 | | | | | | | | 0 | 1 | 2 | | | 3 | 4 | | 22 | 1 | 9 | 3 | 10 | 49 | 3 | 62 | 65 | 117 | 407 |
| 28 | ಉಡುಪಿ | | | | 0 | 0 | | 0 | 0 | 0 | 0 | 0 | 0 | | | | | | | | 0 | | | | | 0 | | | | | | | 0 | 0 | | | 0 | 0 | 0 |
| 29 | ಉತ್ತರ ಕನ್ನಡ | | | | 0 | 1 | 1 | 2 | 6 | 6 | 0 | 12 | 14 | | | | | | | | 0 | | | | | 0 | 1 | | 2 | | | | 1 | 4 | | 2 | 2 | 6 | 20 |
| 30 | ಯಾದಗೀರ್ | | | | 0 | 1 | 2 | 3 | 3 | 3 | 2 | 8 | 11 | | | | | | | | 0 | | | | | 0 | | | 1 | | | 1 | 1 | 3 | | 3 | 3 | 6 | 17 |
| 31 | ವಿಜಯನಗರ | | | 1 | 1 | 0 | | 0 | 1 | 1 | 0 | 2 | 3 | | | | | | | | 0 | | | | | 0 | 1 | | 1 | | 1 | 1 | 1 | 5 | | 2 | 2 | 7 | 10 |
| | ಒಟ್ಟು | 1 | 6 | 44 | 51 | 154 | 184 | 338 | 538 | 642 | 240 | 1420 | 1809 | 1 | 1 | 1 | 1 | 2 | 1 | 3 | 10 | 5 | 25 | 2 | 1 | 33 | 56 | 2 | 190 | 10 | 72 | 54 | 84 | 468 | 25 | 350 | 375 | 886 | 2695 |

# ಅನುಬಂಧ-2

## ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:148(203) (ಈ)ಗೆ ವಿವರ

## ದಿನಾಂಕ:01/08/2026 ರಲ್ಲಿದ್ದಂತೆ ರೇಷ್ಮೆ ಇಲಾಖೆಯಲ್ಲಿ ಜಿಲ್ಲಾವಾರು ಖಾಲಿ ಇರುವ ಹುದ್ದೆಗಳ ವಿವರ

| ಕ್ರ.ಸಂ. | ಜಿಲ್ಲೆ | ತಾಂತ್ರಿಕ – ಎ | | | | ಬಿ | | | ಸಿ | | | | ತಾಂತ್ರಿಕ ಒಟ್ಟು (ಎ+ಬಿ+ಸಿ) | ತಾಂತ್ರಿಕೇತರ – ಎ | | | | | | | | ಬಿ | | | | | ಸಿ | | | | | | | | ಡಿ | | | ತಾಂತ್ರಿಕೇತರ (ಎ+ಬಿ+ಸಿ+ಡಿ) ಒಟ್ಟು | ಒಟ್ಟಾರೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | 1 | 2 | 3 | ಒಟ್ಟು | 4 | 5 | ಒಟ್ಟು | 6 | 7 | 8 | ಒಟ್ಟು | | 9 | 10 | 11 | 12 | 13 | 14 | 15 | ಒಟ್ಟು | 16 | 17 | 18 | 19 | ಒಟ್ಟು | 20 | 21 | 22 | 23 | 24 | 25 | 26 | ಒಟ್ಟು | 27 | 28 | ಒಟ್ಟು | | |
| 1 | ಬಾಗಲಕೋಟೆ | | | | | 1 | 1 | 2 | 4 | 9 | 1 | 14 | 16 | | | | | | | | 0 | | | | | 0 | 0 | | 0 | | 0 | 1 | | 1 | | 6 | 6 | 7 | 23 |
| 2 | ಬೆಂಗಳೂರು(ನ) | 1 | 0 | | | 8 | 0 | 8 | 3 | 25 | 6 | 34 | 42 | 1 | 0 | 0 | 1 | 2 | | 1 | 5 | 0 | 0 | 1 | 1 | 2 | 0 | 1 | 8 | 2 | 8 | 14 | 7 | 40 | 0 | 6 | 6 | 53 | 95 |
| 3 | ಬೆಂಗಳೂರು(ಗ್ರಾ) | | | | | 5 | 0 | 5 | 17 | 34 | 11 | 62 | 67 | | | | | | | | 0 | | 0 | | | 0 | 0 | | 1 | | 2 | 2 | 4 | 9 | 0 | 0 | 0 | 9 | 76 |
| 4 | ಬೆಳಗಾಂ | | 0 | 0 | | 2 | 1 | 3 | 5 | 15 | 2 | 22 | 25 | | | | | | | | 0 | | | | | 0 | 0 | | 0 | | 1 | 1 | 1 | 3 | | 5 | 5 | 8 | 33 |
| 5 | ಬಳ್ಳಾರಿ | | | | | 2 | 0 | 2 | 0 | 12 | 3 | 15 | 17 | | | | | | | | 0 | | | | | 0 | 0 | | 0 | | | 1 | | 1 | | 3 | 3 | 4 | 21 |
| 6 | ಬೀದರ್ | | | | | 2 | 1 | 3 | 4 | 8 | 2 | 14 | 17 | | | | | | | | 0 | | | | | 0 | 0 | | 0 | | 1 | 1 | 1 | 3 | | 2 | 2 | 5 | 22 |
| 7 | ಬಿಜಾಪುರ | | | | | 0 | 0 | 0 | 0 | 6 | 3 | 9 | 9 | | | | | | | | 0 | | 0 | | | 0 | 0 | | 0 | | | | 1 | 1 | | 0 | 0 | 1 | 10 |
| 8 | ಚಾಮರಾಜನಗರ | | | | | 7 | 1 | 8 | 8 | 19 | 12 | 39 | 47 | | | | | | | | 0 | | 0 | | | 0 | 0 | | 1 | | 1 | 2 | 3 | 7 | 0 | 9 | 9 | 16 | 63 |
| 9 | ಚಿಕ್ಕಮಗಳೂರು | | | | | 1 | 0 | 1 | 2 | 2 | 0 | 4 | 5 | | | | | | | | 0 | | | | | 0 | 0 | | 1 | | | | 1 | 2 | | 1 | 1 | 3 | 8 |
| 10 | ಚಿತ್ರದುರ್ಗ | | | | | 2 | 0 | 2 | 3 | 15 | 8 | 26 | 28 | | | | | | | | 0 | | | | | 0 | 0 | | 2 | | 2 | 1 | 4 | 9 | | 3 | 3 | 12 | 40 |
| 11 | ಚಿಕ್ಕಬಳ್ಳಾಪುರ | | | | | 10 | 2 | 12 | 32 | 74 | 21 | 127 | 139 | | | | | | | | 0 | | 0 | | | 0 | 0 | | 8 | 1 | 5 | 2 | 4 | 20 | 0 | 9 | 9 | 29 | 168 |
| 12 | ದಕ್ಷಿಣ ಕನ್ನಡ | | | | | 0 | 0 | 0 | | 0 | 0 | 0 | 0 | | | | | | | | 0 | | | | | 0 | 0 | | | | | | | 0 | | | 0 | 0 | 0 |
| 13 | ದಾವಣಗೆರೆ | | | | | 2 | 0 | 2 | 0 | 3 | 1 | 4 | 6 | | | | | | | | 0 | | | | | 0 | 0 | | 1 | | | 1 | 1 | 3 | | 0 | 0 | 3 | 9 |
| 14 | ಧಾರವಾಡ | | | 0 | | 1 | 0 | 1 | 1 | 4 | 0 | 5 | 6 | | | | | | | | 0 | | 0 | | | 0 | 0 | | 0 | | | 0 | 1 | 1 | | 1 | 1 | 2 | 8 |
| 15 | ಗದಗ | | | 0 | | 1 | 0 | 1 | 5 | 7 | 0 | 12 | 13 | | | | | | | | 0 | | | | | 0 | 0 | | 1 | | | | 1 | 2 | | 3 | 3 | 5 | 18 |
| 16 | ಗುಲ್ಬರ್ಗಾ | | 0 | | | 1 | 0 | 1 | 0 | 7 | 0 | 7 | 8 | | | | | | | | 0 | | | | | 0 | 0 | | 2 | | 1 | 0 | 1 | 4 | | 2 | 2 | 6 | 14 |
| 17 | ಹಾಸನ | | | | | | 2 | 2 | 21 | 21 | 8 | 50 | 52 | | | | | | | | 0 | | 0 | | | 0 | 0 | | 7 | | 1 | 1 | 4 | 13 | | 16 | 16 | 29 | 81 |
| 18 | ಹಾವೇರಿ | | | | | 0 | 0 | 0 | 8 | 12 | 0 | 20 | 20 | | | | | | | | 0 | | 0 | | | 0 | 0 | | 0 | 1 | 2 | 2 | 3 | 8 | | 5 | 5 | 13 | 33 |
| 19 | ಕೊಡಗು | | | | | 0 | 0 | 0 | | 0 | 0 | 0 | 0 | | | | | | | | 0 | | | | | 0 | 0 | | | | | | | 0 | | | 0 | 0 | 0 |
| 20 | ಕೋಲಾರ | | | | | 11 | 1 | 12 | 21 | 56 | 15 | 92 | 104 | | | | | | | | 0 | | 0 | | | 0 | 0 | | 6 | | 2 | 1 | 3 | 12 | 0 | 13 | 13 | 25 | 129 |
| 21 | ಕೊಪ್ಪಳ | | | | | | 0 | 0 | 0 | 4 | 2 | 6 | 6 | | | | | | | | 0 | | | | | 0 | 0 | | 0 | | | 1 | 1 | 2 | | 1 | 1 | 3 | 9 |
| 22 | ಮಂಡ್ಯ | | | | | 7 | 1 | 8 | 17 | 42 | 17 | 76 | 84 | | | | | | | | 0 | | 0 | | | 0 | 0 | | 6 | | 2 | 2 | 5 | 15 | | 10 | 10 | 25 | 109 |
| 23 | ಮೈಸೂರು | | 0 | | | 6 | 1 | 7 | 7 | 29 | 13 | 49 | 56 | | | | | | | | 0 | 1 | 0 | | | 1 | 0 | | 0 | 0 | 2 | 3 | 4 | 9 | | 35 | 35 | 45 | 101 |
| 24 | ರಾಯಚೂರು | | | | | 1 | 0 | 1 | 6 | 5 | 4 | 15 | 16 | | | | | | | | 0 | | | | | 0 | 0 | | 0 | | 1 | 1 | 1 | 3 | | 2 | 2 | 5 | 21 |
| 25 | ರಾಮನಗರ | | | | | 14 | 2 | 16 | 32 | 89 | 37 | 158 | 174 | | | | | | | | 0 | | 0 | | | 0 | 0 | | 4 | | 5 | 2 | 5 | 16 | 0 | 18 | 18 | 34 | 208 |
| 26 | ಶಿವಮೊಗ್ಗ | | | | | 3 | 0 | 3 | 0 | 3 | 0 | 3 | 6 | | | | | | | | 0 | | | | | 0 | 0 | | 1 | | 0 | 1 | 1 | 3 | | 0 | 0 | 3 | 9 |
| 27 | ತುಮಕೂರು | | 0 | | | 15 | 0 | 15 | 63 | 107 | 44 | 214 | 229 | | | | | | | | 0 | 1 | 0 | | | 1 | 0 | | 8 | 0 | 6 | 4 | 8 | 26 | 0 | 35 | 35 | 62 | 291 |
| 28 | ಉಡುಪಿ | | | | | 0 | 0 | 0 | | 0 | 0 | 0 | 0 | | | | | | | | 0 | | | | | 0 | 0 | | | | | | | 0 | | | 0 | 0 | 0 |
| 29 | ಉತ್ತರ ಕನ್ನಡ | | | | | 1 | 1 | 2 | 6 | 6 | 0 | 12 | 14 | | | | | | | | 0 | | | | | 0 | 0 | | 2 | | | | 1 | 3 | | 2 | 2 | 5 | 19 |
| 30 | ಯಾದಗೀರ್ | | | | | | 0 | 0 | 1 | 3 | 1 | 5 | 5 | | | | | | | | 0 | | | | | 0 | 0 | | 0 | | | | 1 | 1 | | 2 | 2 | 3 | 8 |
| 31 | ವಿಜಯನಗರ | | | | | | 0 | 0 | 0 | 1 | 0 | 1 | 1 | | | | | | | | 0 | | | | | 0 | 0 | | 0 | | 1 | 1 | 1 | 3 | | 0 | 0 | 3 | 4 |
| | ಒಟ್ಟು | 1 | 0 | 0 | 1 | 109 | 14 | 117 | 266 | 618 | 211 | 1095 | 1233 | 1 | 0 | 0 | 1 | 2 | 0 | 1 | 5 | 2 | 0 | 1 | 1 | 4 | 0 | 1 | 59 | 4 | 43 | 45 | 48 | 220 | 0 | 189 | 189 | 414 | 1631 |